# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಪರಮೇಶ್ವರ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ಮಂಚಯ್ಯ | 05.10.2024 | |
| ವಯಸ್ಸು | ಃ 42 ವರ್ಷ | | |
| ವೃತ್ತಿ | ಃ ಆಟೋ ಡ್ರೈವರ್ | ಪ್ರಾ.ಸಾ. | ಃ 16 |
| ವಾಸಸ್ಥಳ | ಃ ಅಶೋಕಪುರಂ | ಚಾ.ಸಾ. | ಃ 11 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇದೆ. ನಾನು ಆಟೋ ಓಡಿಸಿಕೊಂಡು ಜೀವನ ಮಾಡುತ್ತೇನೆ. ದಿಃ*13.01.2022* ರಂದು ಬೆಳಗ್ಗೆ *11.30-11.45* ರ ಸುಮಾರಿಗೆ ನಾನು ಬಳ್ಳಾಲ್ ಸರ್ಕಲ್ ಬಳಿ ಆಟೋ ನಿಲ್ಲಿಸಿಕೊಂಡು ನಿಂತಿದ್ದಾಗ ಕೆ.ಆರ್.ಆಸ್ಪತ್ರೆಗೆ ಕಲ್ ಬಿಲ್ಡಿಂಗ್ ಗೆ ಒಬ್ಬ ಪ್ರಯಾಣಿಕರು ಬಂದಿದ್ದರು ಅವರನ್ನು ಕರೆದುಕೊಂಡು ಹೋಗಿ ಅಲ್ಲಿಗೆ ಬಿಟ್ಟು ನಾನು ಸಾಮಾನು ತರಲು ಕೆ.ಆರ್.ಮಾರ್ಕೆಟ್ ಗೆ ಹೋಗಿದ್ದೆ ಅಲ್ಲಿಂದ ವಾಪಸ್ಸು ಬರುವಾಗ *11.50* ರ ವೇಳೆಯಲ್ಲಿ ರಾಜ್ ಕಮಲ್ ಟಾಕೀಸ್ ಹಿಂಭಾಗದ ರಸ್ತೆಯಲ್ಲಿ ಆರೋಪಿತರು ಅದ್ವೈತ ರೆಸಿಡೆನ್ಸಿ ಹತ್ತಿರ ನಿಂತಿದ್ದರು ಆರೋಪಿತರನ್ನು ಅಲ್ಲಿ ಏಕೆ ನಿಂತಿದ್ದಾರೆ ಎಂದು ವಿಚಾರಿಸಿದಾಗ ಸೋಮಶೇಖರ್ ತನ್ನ ಹೆಂಡತಿಗೆ ಯಾರೋ ಒಬ್ಬ ವ್ಯಕ್ತಿ ಮಲಗಬೇಕು ಬಾ ಎಂದು ಮಾತನಾಡಿದ್ದೇನೆ ಎಂದು ತಿಳಿಸಿದ್ದರು. ಆ ರೀತಿ ಮಾತನಾಡಿದ್ದ ವ್ಯಕ್ತಿಯ ತಾಯಿಯನ್ನು

ಕರೆದುಕೊಂಡು ಆ ವ್ಯಕ್ತಿ ಕೆಲಸ ಮಾಡುವ ಅದ್ವೈತ ರೆಸಿಡೆನ್ಸಿ ಬಳಿ ಬಂದಿದ್ದಾಗಿ ತಿಳಿಸಿದ್ದರು. ಆಗ ಯಾರು ಹುಡುಗ ಎಂದು ನೋಡಲು ನಾನು ಸಹ ಅಲ್ಲಿ ನಿಂತುಕೊಂಡಿದ್ದೆ. ಆ ಕಾಲಕ್ಕೆ ಆರೋಪಿತರೊಂದಿಗೆ ಇನ್ನೊಬ್ಬ ಹುಡುಗ ನಿಂತಿದ್ದ ಆತನನ್ನು ವಿಚಾರಿಸಿದಾಗ ನಾನು ಸೋಮಶೇಖರನ ಗೆಳೆಯನಿರುವುದಾಗಿ ಮತ್ತು ಕಲಾಮಂದಿರದ ಕಡೆಗೆ ಹೋಗಬೇಕು ಎಂದು ಹೇಳಿದಾಗ ಅವರೊಂದಿಗೆ ಕರೆದುಕೊಂಡು ಬಂದಿದ್ದ. ಆ ಕಾಲಕ್ಕೆ ಪ್ರಜ್ವಲ್ ಎನ್ನುವಾತನ ತಾಯಿ ತನ್ನ ಮಗನನ್ನು ಕರೆದುಕೊಂಡು ಬರಲು ಹೋಟೇಲ್ ಬಳಿ ಹೋಗಿದ್ದರು ನಂತರ ತನ್ನ ಮಗನನ್ನು ಕರೆದುಕೊಂಡು ಬಂದು ಇವನೇ ನನ್ನ ಮಗ ಎಂದು ಹೇಳಿದ್ದರು ಆಗ ಸೋಮಶೇಖರ್ ಮತ್ತು ಮಹದೇವ ಯಾರೋ ನಿನಗೆ ನಂಬರ್ ಕೊಟ್ಟಿದ್ದು ನನ್ನ ಹೆಂಡತಿಗೆ ಪೋನ್ ಮಾಡುತ್ತೀಯಾ ಎಂದು ಪ್ರಜ್ವಲ್ ಗೆ ಕೇಳಿದ್ದರು. ಆಗ ಪ್ರಜ್ವಲ್ ನು ಸರಿಯಾಗಿ ಮಾತನಾಡದೇ ಇದ್ದಾಗ ಪ್ರಜ್ವಲ್ ಗೆ ಸೋಮಶೇಖರ *2-3* ಏಟು ಕೈಯಿಂದ ಹೊಡೆದಿದ್ದ ಮತ್ತು ಹೇಳದೇ ಇದ್ದರೆ ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಬಿದರಿಸಿದ್ದ. ಆ ಕಾಲಕ್ಕೆ ಪ್ರಜ್ವಲ್ ನು ಆಲನಹಳ್ಳಿಯ ಡೈರಿಯ ಹತ್ತಿರ ಇರುವ ಹೊಟೆಲ್ ನಲ್ಲಿ ತಾನು ಮತ್ತು ಗೌರಮ್ಮ ಕೆಲಸ ಮಾಡುತ್ತಿರುವಾಗ ಗೌರಮ್ಮನ ನಂಬರ್ ಪಡೆದಿದ್ದೆ ಎಂದು ಹೇಳಿದ್ದ. ಆಗ ಸೋಮಶೇಖರ್ ನು ನೀನು ಸರಿಯಾಗಿ ಹೇಳುತ್ತಿಲ್ಲ ಎಂದು ಗಲಾಟೆ ಮಾಡಿದಾಗ ನಾನು ಇಲ್ಲಿ ಗಲಾಟೆ ಮಾಡುವುದು ಬೇಡ ಪಕ್ಕದಲ್ಲೇ ಪೋಲೀಸ್ ಠಾಣೆಯಿದೆ ಹೋಗೋಣ ಎಂದು ಹೇಳಿದ್ದೆ. ಆಗ ಪ್ರಜ್ವಲ್ ನು ಯುನಿಪಾರಂ ಬದಲಿಸಿ ಬರುತ್ತೇನೆ ಎಂದು ಹೇಳಿ ತನ್ನ ತಾಯಿಯ ಜೊತೆ ಅದ್ವೈತ ರೆಸಿಡೆನ್ಸಿಗೆ ಹೋಗಿದ್ದ. ಆದಾಗಿ *2-3* ನಿಮಿಷಕ್ಕೆ ಕಟ್ಟಡದ ಮೇಲಿಂದ ಯಾರೋ ಬಿದ್ದಿದ್ದು ಕಂಡಿತ್ತು ಆಗ ಹತ್ತಿರ ಹೋಗಿ ನೋಡಿದಾಗ ಪ್ರಜ್ವಲ್ ಬಿದ್ದಿದ್ದ. ಆಗ ನಾನು, ಮಹದೇವ, ಸೋಮಶೇಖರ್ ಮತ್ತು ಇತರರು ಪ್ರಜ್ವಲ್ ನನ್ನು ನನ್ನ ಆಟೋದಲ್ಲೇ

ಕರೆದುಕೊಂಡು ಹೋಗಿ ಕೆ.ಆರ್.ಆಸ್ಪತ್ರೆಗೆ ಸೇರಿಸಿದ್ದೆವು. ನಂತರ ನಾನು ಅಲ್ಲಿಂದ ಹೊರಟುಹೋಗಿದ್ದೆ. ನಂತರ ಪ್ರಜ್ವಲ್ ನು ಮರಣಹೊಂದಿದ್ದಾನೆ ಎಂದು ಗೊತ್ತಾಗಿತ್ತು. ಪ್ರಜ್ವಲ್ ನು ಯಾವ ಕಾರಣಕ್ಕೆ ಕಟ್ಟಡದ ಮೇಲಿಂದ ಬಿದ್ದ ಎಂದು ಹಿನ್ನೆಲೆ ನನಗೆ ಗೊತ್ತಿಲ್ಲ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಧೀಶರ ಮುಂದೆ ಸಹ ಇದೇ ರೀತಿ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ–26 ಮತ್ತು ಸಹಿಯನ್ನು ನಿ.ಪಿ–26(ಎ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. ಪ್ರಜ್ವಲ್ ನಿಗೆ ಸೊಮಶೇಖರ್ ಮತ್ತು ಮಹದೇವ ಬೈದು ಗಲಾಟೆ ಮಾಡಿ ನಿನ್ನನ್ನು ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿದ್ದರಿಂದ ಮತ್ತು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಕೇಸ್ ಮಾಡಿಸಬಹುದು ಎಂದು ಕೊಂಡು ಪ್ರಜ್ವಲ್ ಕಟ್ಟಡದ ಮೇಲಿಂದ ಬಿದ್ದು ಮರಣಹೊಂದಿದ್ದಾನೆ ಎಂದರೆ ನಿಜ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು